ಮಧುಗಿರಿಯ ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ ನ್ಯಾಯಾಲಯದಲ್ಲಿ

**<u>ಸಿಸಿ. ಸಂಖ್ಯೆ 69/2024</u>**

ಪ್ರ.ವ.ಬೋ.ತಾಃ 18-06-2026

ಚಾಸಾಃ 18 ಫ್ರಾಸಾಃ 11

| | |
|---|---|
| ಸಾಕ್ಷಿಯ ಹೆಸರು | ಪಿ.ಎಂ. ಅಮ್ಮಣ್ಣಗಿ |
| ತಂದೆ/ಗಂಡನ ಹೆಸರು | ಮೀರಾ ಸಾಬ್ |
| ವಯಸ್ಸು | 29 ವರ್ಷ |
| ವೃತ್ತಿ | ಪಿ.ಎಸ್.ಐ., ತುಮಕೂರು ಗ್ರಾಮಾಂತರ ಪೊಲೀಸ್ ಠಾಣೆ |
| ವಾಸ | ತುಮಕೂರು ತಾ. |

**<u>ಮುಖ್ಯ ವಿಚಾರಣೆಃ- ಮಾನ್ಯ ಸ.ಸ.ಅ. ರವರಿಂದಃ-</u>**

ನಾನು ದಿಃ01.11.2023 ರಿಂದ 04.11.2025 ರವರೆಗೆ ಮಿಡಿಗೇಶಿ ಪೊಲೀಸ್ ಠಾಣೆಯಲ್ಲಿ ಪಿ.ಎಸ್.ಐ. ಆಗಿ ಕರ್ತವ್ಯ ನಿರ್ವಹಿಸಿದ್ದೇನೆ.

ದಿನಾಂಕಃ 19.07.2024 ರಂದು ಚಾಸಾ.19 ರವರು ಮೃತನ ಶವ ಪಂಚನಾಮೆ ವರಿದಯನ್ನು ತಯಾರಿಸುವಂತೆ ನನಗೆ ತಿಳಿಸಿದ್ದು, ಅದರಂತೆ ಅದೇ ದಿನ ಮಧುಗಿರಿ ಸರ್ಕಾರಿ ಆಸ್ಪತ್ರೆಗೆ ಭೇಟಿ ನೀಡಿ ಚಾಸಾ.6 ರಿಂದ 8 ರವರ ಸಮಕ್ಷಮ ಬೆಳಗ್ಗೆ 9.00 ರಿಂದ 10.00 ಗಂಟೆಯವರೆಗೆ ಶವ ತನಿಖಾ ವರದಿಯನ್ನು ನಡೆಸಿರುತ್ತೇನೆ. ಆ ಶವ ತನಿಖಾ ವರದಿಯನ್ನು ಈಗ ನೋಡುತ್ತಿದ್ದು, ಅದನ್ನು ನಿಪಿ.16 ಎಂದು ಈಗಾಗಲೇ ಗುರುತಿಸಲಾಗಿದೆ. ಸಾಕ್ಷಿಯ

ಸಹಿಯನ್ನು ನಿಪಿ.16(ಬಿ) ಎಂದು ಗುರುತಿಸಲಾಯಿತು. ಅದೇ ದಿನ ಚಾಸಾ.9 ರವರ 12 ರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ. ನಂತರ ಈ ಕೇಸಿನ ಕಡತವನ್ನು ಮುಂದಿನ ತನಿಖೆಗಾಗಿ ಚಾಸಾ.19 ರವರಿಗೆ ವಹಿಸಿಕೊಟ್ಟಿರುತ್ತೇನೆ.

**ಪಾಟೀ ಸವಾಲುಃ– ಆರೋಪಿ ಪರವಾಗಿಃ ಶ್ರೀ ಆರ್.ವಿ.ಎಸ್. ವಕೀಲರಿಂದಃ–**

ಆ ದಿನ ನಾನು ಸರ್ಕಾರಿ ಆಸ್ಪತ್ರೆಗೆ ಹೋಗಿಲ್ಲ, ಯಾವುದೇ ಶವ ಪಂಚನಾಮೆಯನ್ನು ತಯಾರಿಸಿಲ್ಲ ಹಾಗೂ ಯಾವುದೇ ಸಾಕ್ಷಿದಾರರ ಹೇಳಿಕೆಗಳನ್ನು ಪಡೆದುಕೊಂಡಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆಃ– ಇಲ್ಲಾ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ನುಡಿದಂತೆ ಗಣಕೀಕೃತಗೊಳಿಸಲಾಯಿತು)

ಓ.ಹೇ.ಸಾ.ಸ.ಇ.ಒ.

ಪ್ರಧಾನ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆಎಂಎಫ್‌ಸಿ, ಮಧುಗಿರಿ